ಮಕ್ಕಳಿಗಾಗಿ ಬೈಬಲ್
ಅರ್ಪಿಸುವ



# ಒಳ್ಳೆಯ ಅರಸರು,
# ಕೆಟ್ಟ ಅರಸರು

ಬರಹಗಾರರು: Edward Hughes

ಚಿತ್ರಲೇಖಕರು: Lazarus

ಅಳವಡಿಸುವವರು: Ruth Klassen

ಪದ್ಮಾ ಸ್ಸೈಲೇಸ್: Vinay Shirol

ತಯಾರಕರು: Bible for Children
www.M1914.org

©2017 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಮನಸ್ಸೆಯ ತಂದೆಯಾದ ಹಿಜ್ಕೀಯನು ಸತ್ತ ನಂತರ ಮನಸ್ಸೆಗೆ ದುಖ: ದಿನವಾಯಿತು. ಹನ್ನೇರೆಡು ವರ್ಷದವನಾದ ಮನಸ್ಸೆಯು ಯಹೂದ ಜನರಿಗೆ ರಾಜನಾದನು. ಅವನು ೫೫ ವರ್ಷ ಒಳ್ಳೆಯ ರಾಜನಾಗಿ ಆಳ್ವಿಕೆ ಮಾಡುವುದಕ್ಕೆ ದೇವರ ಸಹಾಯ ಅವನಿಗೆ ಅವಶ್ಯವಿತ್ತು.



ಆದರೆ ಮನಸ್ಸೆಯು ದೇವರ ವಿಷಯದಲ್ಲಿ ಅಜ್ಞಾನಿಯಾಗಿ ನಡೆದು ವಿಗ್ರಹಗಳಿಗೆ ನೈವಿದ್ಯಮಾಡುವುದಕ್ಕೆ ಯಜ್ಞವೇದಿಯನ್ನು ಕಟ್ಟಿದನು. ಆತನು ಅಶೇರ ವಿಗ್ರಸ್ಥಂಬವನ್ನುಮಾಡಿ ದೇವರ ಪರಿಶುದ್ಧ ಆಲಯದಲ್ಲಿಟ್ಟನು.



ಆದರೆ ದೇವರು ಮೋಶೆಗೆ ಹೇಳಿದ್ದೆನೆಂದರೆ
“ನೀವು ಯಾವುದೇ ವಿಧವಾದ ವಿಗ್ರಹಗಳನ್ನು
ಮಾಡಿ ಅದಕ್ಕೆ ಆಡ್ಡ ಬಿದ್ದು ಅದನ್ನು
ಆರಾಧಿಸಭಾರದೆಂಬುದೆ”.



ಆತನು ಕಣಿ ಕೇಳುವುದು, ಮಂತ್ರ ತಂತ್ರಗಳನ್ನು ಮಾಡುವುದು ಮತ್ತು ವಿಗ್ರಹಗಳಿಗೆ ಮಕ್ಕಳನ್ನು ಆಹುತಿ ಕೊಡುವಂತ ಕಾರ್ಯಗಳನ್ನು ನಡೆಸಿ ಜನರನ್ನು ದೇವರಿಂದ ದೂರ ಮಾಡಿದನು. ಮನಸ್ಸೆಯು ಆವಿದೇಯನಾಗಿ ದೇವರಿಗೆ ಮಹಾ ಕೋಪವನ್ನುಂಟುಮಾಡಿದನು.



ಹೀಗೆ ಜನರು ಅವಿದೇಶರಾಗುವಾಗ ದೇವರು ಅವರನ್ನು ಶಿಕ್ಷಿಸಿದನು. ಆದುದ್ದರಿಂದ ದೇವರು ಮನಸ್ಸೆಗೆ ವಿರೋದವಾಗಿ ಅಸ್ಸ್ಯೂರ್ಯರ ಸೈನ್ಯವನ್ನು ಅವನ ಮೇಲೆ ಬೀಳುವಂತೆ ಮಾಡಿ ಅವನನ್ನು ಸರಪಳಿಯಿಂದ ಕಟ್ಟಿ ಬ್ಯಾಬಿಲೋನಿಗೆ ಸೆರೆಯಾಗಿ ತಗೆದುಕೊಂಡು ಹೋಗುವಂತೆ ದೇವರು ಮಾಡಿದನು.





ಅಲ್ಲಿ ಅವರು ಕೊಡುವಂತ ವೇದನೆಯನ್ನು ತಾಳಲಾರದೆ ಮನಸ್ಸೆಯು ತನ್ನನ್ನು ತಗ್ಗಿಸಿಕೊಂಡು ದೇವರಿಗೆ ಮೊರೆಯಿಟ್ಟನು. ಆ ಸತ್ತ ವಿಗ್ರಹಗಳಿಗೆ ಅವನು ಮೊರೆಯಿಡಲಿಲ್ಲ.



ಅವನ ಎಲ್ಲಾ
ಬಲಹೀನತೆಗಳಲ್ಲಿ
ದೇವರು ಮನಸ್ಸೆಯ
ಪ್ರಾರ್ಥನೆಗೆ ಉತ್ತರವನ್ನು
ದಯ ಪಾಲಿಸಿದರಾ?

ಹೌದು, ದೇವರು ಆತನ ಪ್ರಾರ್ಥನೆಗೆ
ಉತ್ತರವನ್ನುಕೊಟ್ಟು ಅವನನ್ನು ತಿರುಗಿ
ಯೇರುಸಲೇಮ್‌ಗೆ ಕರೆದುಕೊಂಡುಬಂದು
ಅವನ ಸಿಂಹಾಸನವನ್ನು ಕೊಟ್ಟರು.
ಮತ್ತೆ ಅವನು ಜನರನ್ನು ಆಳಿದನು.
ಕೊನೆಗೆ ಮನಸ್ಸೆಯು ಕರ್ತನೇ



ದೇವರಾಗಿದ್ದನೆಂದು
ತಿಳಿದುಕೊಂಡನು.

ಮನಸ್ಸೆಯು ಹೊಸ ವ್ಯಕ್ತಿಯಾಗಿ ಮಾರ್ಪಟ್ಟು ಯೆರುಸಲೇಮ್‌ನಲ್ಲಿರುವ ಎಲ್ಲಾ ವಿಗ್ರಹಗಳನ್ನು ತಗೆದು ಬಿಸಾಡಿದನು. ಮತ್ತು ಹಾಳಗಿರುವ ಯಜ್ಞವೇದಿಯನ್ನು ಸರಿಪಡಿಸಿ ದೇವರಿಗೆ ಕೃತಜ್ಞತೆಯ ಯಜ್ಞವನ್ನು ಸಮರ್ಪಿಸಿದನು.



ಮತ್ತು ಅಲ್ಲಿರುವ ಎಲ್ಲ ಇಸ್ರೆಯೇಲರಿಗೆ ನೀವು ಕರ್ತನಾದ ದೇವರನ್ನು ಮಾತ್ರವೇ ಸೇವಿಸಬೇಕೆಂದು ಮನಸ್ಸೆಯು ಆಜ್ಞಾಪಿಸಿದನು. ಆತನಲ್ಲಿ ಒಂದು ಮಹತ್ತಾದ ಬದಲಾವಣೆಯಾಯಿತು.



ಮನಸ್ಸೆಯು ಸತ್ತ ನಂತರ ಅವನ ಮಗನಾದ ಅಮೋನನು ಅರಸನಾಗಿ ತನ್ನ ಮನಸ್ಸನ್ನು ವಿಗ್ರಹಗಳ ಕಡೆಗೆ ತಿರುಗಿಸಿದನು. ಮನಸ್ಸೆಯ ಹಾಗೆ ದೇವರ ಮುಂದೆ ತನ್ನನ್ನು ತಗ್ಗಿಸಿಕೊಳ್ಳಲಿಲ್ಲ. ಅಮೋನನು ಬಹಳವಾಗಿ ಪಾಪವನ್ನು ಮಾಡಿದನು ಅವನ ಮನೆಯಲ್ಲಿರುವ ಒಬ್ಬ ಸೇವಕನಿಂದಲೇ ಕೊಲೆಯಾದನು.

ಅವನು ಎರಡು ವರ್ಷ ಆಳ್ವಿಕೆಯನ್ನು ಮಾಡಿದನು.



ಯೋಷೀಯನು ಎಂಟು ವರ್ಷದವನಾಗಿದ್ದನು. ಅವನು ಮುಂದಿನ ಅರಸನಾದನು. ಅವನು ದೇವರ ದೃಷ್ಟಿಯಲ್ಲಿ ಸರಿಯಾದುದ್ದನ್ನು ಮಾಡಿ ಎಲ್ಲಾ ಸುಳ್ಳು ದೇವರುಗಳನ್ನು ನಾಶ ಮಾಡಿದನು. ಅವನು ೩೧ ವರ್ಷ ಆಳ್ವಿಕೆ ಮಾಡಿದನು.



ಒಳ್ಳೆಯ ಅರಸನಾದ ಯೋಷೀಯನು ಅಲ್ಲಿರುವ ಯಜ್ಞವೇದಿಯನ್ನು ಸರಿ ಪಡಿಸಿ, ಮೋಶೆಯ ಮೂಲಕ ಕೊಡಲ್ಪಟ್ಟಿರುವ ದೇವರ ಧರ್ಮಶಾಸ್ತ್ರದ ಪುಸ್ತಕವನ್ನು ಕಂಡುಕೊಂಡನು.



ಅರಸನು ಧರ್ಮಶಾಸ್ತ್ರದಲ್ಲಿರುವ ವಾಕ್ಯವನ್ನು ಕೇಳಿದಾಗ
ಅವನ ಬಟ್ಟೆಗಳನ್ನು ಹರಿದುಕೊಂಡು
ದುಖ:ಗೊಳಾದನು.
ಮತ್ತು ಅವನ ಪೂರ್ವಿಕರು
ಯಾವ ರೀತಿ ದೇವರಿಗೆ
ಅವಿದೇಯರಾದರು ಎಂದು
ತಿಳಿದುಕೊಂಡನು.



ಹುಲ್ದಾ ಎಂಬ ಪ್ರವಾದಿನಿಯು ಅರಸನಿಗೆ ದೇವರ ಸಂದೇಶವನ್ನು ಕೊಟ್ಟಳು. “ಇವರು ನನ್ನನ್ನು ತಿರಸ್ಕಾರ ಮಾಡಿದ್ದರಿಂದ ನಾನು ಈ ಪುಸ್ತಕದಲ್ಲಿ ಬರೆದಿರುವ ಎಲ್ಲಾ ಶಾಪಗಳನ್ನು ಅವರ ಮೇಲೆ ಬರಮಾಡುವೆನು”, ಆದರೆ

ಯೋಷೀಯನ ತಗ್ಗಿಸಿಕೊಳ್ಳುವಿಕೆ ಮತ್ತು ಅವನ ವಿದೇಯತ್ವದಿಂದ ಆದು ಅವನ ಕಾಲದಲ್ಲಿ ಆಗುವುದಿಲ್ಲ.



ತನ್ನ ಜನರನ್ನು ದೇವರ ಬಳಗೆ ನಡೆಸುವುದಕ್ಕೆ
ದೇವರು ಯೋಷೀಯನಿಗೆ
ಸಹಾಯ ಮಾಡಿದರು.
ಯುದ್ಧ ಸಮಯದಲ್ಲಿ
ಯೋಷೀಯನಿಗೆ
ಬಹಳವಾಗಿ ಅವನ
ವೈರಿಗಳಿಂದ
ಗಾಯವಾಯಿತು.



ಅವನ ಸೇವಕರು ಅವನನ್ನು ರಥದಲ್ಲಿ ಕೂರಿಸಿಕೊಂಡು ಯೇರುಸಲೇಮ್‌ಗೆ ತೆಗೆದುಕೊಂಡು ಹೋದರು ಅವನು ಅಲ್ಲಿ ಸತ್ತನು. ಅವನ ಜನರು ಗೋಳಾಡಿ ಆ ಒಳ್ಳೆಯ ರಾಜನಾದ ಯೋಷೀಯನನ್ನು ಕುರಿತು ಹಾಡನ್ನು ಹಾಡಿದರು.





ಅಲ್ಲಿ ಆಳ್ವಿಕೆಯು ನಿಂತು ಹೋಯಿತು. ಆದರೆ ಒಂದು ದಿನ ಇಸ್ರೆಯೇಲರ ರಾಜನು ಅದನ್ನು ಆಳುವುದಕ್ಕೆ ಬರುತ್ತಾನೆ. ಆತನ ಹೆಸರು ಯೇಸುಕ್ರಿಸ್ತನು, ರಾಜಾದಿ ರಾಜನು ಕರ್ತಾದಿ ಕರ್ತನು ಆಗಿರುವಂತ ಆತನು ಮೊದಲನೆಯ ಸಲ ...



... ಬಂದಾಗ ಶಿಲುಬೆಗೆ
ಏರಿಸಲ್ಪಟ್ಟನು ಪುನರುತ್ಥಾನ
ಹೊಂದಿದನು. ಆದರೆ
ಆತನು ಮತ್ತೇ ತಿರುಗಿ
ಬಂದು ಇಸ್ರೆಯೇಲರನ್ನು
ಮಾತ್ರವಲ್ಲಾ ಭೂಮಿಯ
ಮೇಲಿರುವಂತಹ
ಎಲ್ಲಾ ಜನರನ್ನು
ಆಳುವವವನಾಗಿದ್ದಾನೆ.

ಒಳ್ಳೆಯ ಅರಸರು, ಕೆಟ್ಟ ಅರಸರು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

2 ಪೂರ್ವಕಾಲವೃತ್ತಾಂತ, 33–36

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
ಕೀರ್ತನೆ 119:130

ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು
ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು  ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು.
ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ
ದೇವರೊಂದಿಗೆ ಮಾತಾಡು!
ಯೋಹಾನ 3:16